ಇಂದು ದಿಃ 01.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಿನಾಂಕ 09.05.2015ರಂದು ದಾವಾ ಆಸ್ತಿಗೆ ಸಂಬಂದಿಸಿದಂತೆ ಒಂದು ಸ್ವಾಧೀನ ಕರಾರು ಪತ್ರ ಆಗಿತ್ತು ಎಂದರೆ ಸುಳ್ಳು. ಅದಕ್ಕೆ ದೇವಮಣಿ ಸಹಿ ಮತ್ತು ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ಸುಳ್ಳು. ದೇವಮಣಿ ರವರನ್ನು ಸಂಬಂಧಪಟ್ಟ ಸ್ವಾಧೀನ ಪತ್ರದ ಕರಾರು ಪತ್ರ ಮತ್ತು ದಿನಾಂಕ 09.05.2015ರ ಪ್ರಾಮಿಸರಿನೋಟ್, ದಿನಾಂಕ 06.05.2015ರ ಪ್ರಾಮಿಸರಿ ನೋಟ್ ನಲ್ಲಿರುವ ಸಹಿಗಳನ್ನು ಗುರುತಿಸಲು ಅವರನ್ನು ನ್ಯಾಯಾಲಯಕ್ಕೆ ಕರೆಯಲು ನನಗೆ ತೊಂದರೆ ಇಲ್ಲ. ದಾವಾ ಆಸ್ತಿ ಈಗ ನನ್ನ ಅಣ್ಣ ರಾಜಶೇಖರ್ ಹೆಸರಿನಲ್ಲಿದೆ. 2015ರಲ್ಲಿ ಆ ಆಸ್ತಿಗಳನ್ನು ಭೋಗ್ಯ ಮಾಡಿದಾಗ ಭೋಗ್ಯದಾರರಿಗೆ ಸ್ವಾಧೀನ ಕೊಟ್ಟಿದ್ದರು. ಭೋಗ್ಯ ಮಾಡುವಾಗ ಗುರುಸ್ವಾಮಿ ಮತ್ತು ಮಹೇಶ್, ದೇವಮಣಿ ರವರಿಂದ ಹಣ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ ಟಿ ಸಿ ನೋಡಿದಾಗ ಭೋಗ್ಯ ಮಾಡಿದ ವಿಚಾರ ನನಗೆ ವಿಚಾರ ತಿಳಿಯಿತು ಸಾಕ್ಷಿಯು ಮುಂದುವರಿದು ಊರಿನವರು ಅಂದರೆ ಮಲ್ಲೇಶ್ ರವರ ಮಗ ಗುರುಪ್ರಸಾದ್ ಹೇಳಿದಾಗ ನನಗೆ ವಿಚಾರ ತಿಳಿಯಿತು ಎನ್ನುತ್ತಾರೆ. ಆ ಭೋಗ್ಯದ ವಿಚಾರವನ್ನು ಗುರುಪ್ರಸಾದ್ ನನಗೆ 2015ರಲ್ಲಿ ಹೇಳಿದರು. ಭೋಗ್ಯ ಪತ್ರವನ್ನು 2015ರಲ್ಲಿ ರದ್ದು ಮಾಡಲು ಪ್ರಯತ್ನಿಸಿದೆವು, ಆದರೆ ಹಣ ಕೊಡುತ್ತೇವೆ ಎಂದು ಹೇಳಿದ ಕಾರಣ ಸುಮ್ಮನಿದ್ದೆವು ಎನ್ನುತ್ತಾರೆ. ಭೋಗ್ಯ ಪತ್ರದ ಬಗ್ಗೆ ತಿಳಿದ ತಕ್ಷಣ ದೇವಮ್ಮಣಿರವರಲ್ಲಿ ಕೇಳಿದ್ದೆ. ಹಣ ಕೊಡುತ್ತಾರೆ ಎನ್ನುವ ನಂಬಿಕೆಯಿಂದ ಸುಮ್ಮನಿದ್ದೆ. ನಾನು ಹಣ ಕೊಡದಿದ್ದರೂ ಭಾಗವನ್ನು ಕೇಳುತ್ತಿದ್ದೆವು. 2015ರಲ್ಲಿ ವಿಭಾಗದ ದಾವೆ ಹಾಕಲು ತೊಂದರೆ ಇರಲಿಲ್ಲ ಆದರೆ ದಾವೆ ಹಾಕಿರಲಿಲ್ಲ.

ಒಂದು ವರ್ಷಕ್ಕೆ ಭೋಗ್ಯ ತೀರುವಳಿಯಾಯಿತು. ಭೋಗ್ಯದ ಹಣವನ್ನು ಯಾರು ಕೊಟ್ಟರು ಎಂದರೆ ಹಣ ಕೊಡುವಂತೆ ಇರಲಿಲ್ಲ, ಜಮೀನಿನಲ್ಲಿ ಬೆಳೆ ಬೆಳೆದು ಬೆಳೆ ತೆಗೆದುಕೊಳ್ಳುವ ರೀತಿ ವ್ಯವಸ್ಥೆ ಇತ್ತು ಎನ್ನುತ್ತಾರೆ. ಭೋಗ್ಯ ಮಾಡಿದವರು ಇಳುವರಿ ಭೋಗ್ಯ ಎಂದ ಹೇಳಿದ್ದರು. ಭೋಗ್ಯ ಪತ್ರವನ್ನು ನಾನು ನೋಡಿಲ್ಲ. ಭೋಗ್ಯ ಪತ್ರವನ್ನು ಕೇಳಲಾಗಿ ಇದೆ ತೆಗೆದುಕೊಂಡು ಬಂದು ಕೊಡುತ್ತೇನೆ ಎಂದು ಗುರುಸ್ವಾಮಿರವರು ಹೇಳಿದ್ದರು ಎನ್ನುತ್ತಾರೆ. ಭೋಗ್ಯ ಪತ್ರ ತೆಗೆದುಕೊಂಡು ಬಂದು ಕೊಡದ ಕಾರಣ ನಾನು ಓದಲಾಗಿಲ್ಲ. ಭೋಗ್ಯ ಪತ್ರವನ್ನು ನನಗೆ ಕೊಡದ ಕಾರಣ ಅದಕ್ಕೆ ಯಾರೆಲ್ಲ ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಭೋಗ್ಯ ಪತ್ರಕ್ಕೆ ದೇವಮ್ಮಣಿ ಸಹಿ ಹಾಕಿ ಹಣ ಪಡೆದ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಭೋಗ್ಯದ ಆಸ್ತಿಯನ್ನು ದೇವಮ್ಮಣಿ ತಂದೆ ಬಿಡಿಸಿಕೊಂಡರು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.